

ಅಲ್ಲೇ ನನ್ನ ಬದುಕು ರೂಪಿಸಿಕೊಳ್ಳುತ್ತೇನೆ'' ಅಪ್ಪುರಾಯ ತೊದಲಿದಾಗ ಮೋರೆಯವರಿಗೆ ಆಶ್ಚರ್ಯವಾಯಿತು. ಇಂತಹ ಪೆದ್ದ ಎಲ್ಲಾದರೂ ಇರಲು ಸಾಧ್ಯವೆ? ಎಂದೆಣಿಸಿದ ಅವರು, ''ಕಾನಡಿ ಜನಗಳು ಒಳ್ಳೆಯವರು ಎನ್ನುವುದು ನನಗೆ ಗೊತ್ತು. ಆದರೆ, ಅನಾಮತ್ತಾಗಿ ಒಲಿದು ಬಂದ ಲಕ್ಷ್ಮಿಯನ್ನು ಆಚೆ ಕಳಿಸುತ್ತಾರೆ ಎಂಬುದನ್ನು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ.'' ಎಂದವರು ಮುಂದುವರಿಸಿ, ''ನೋಡು, ಬೆಹರಾಮ್‌ಜೀಯವರು ನಿನಗೆ ದೊಡ್ಡ ಜವಾಬ್ದಾರಿ ವಹಿಸಿ ಹೋಗಿದ್ದಾರೆ. ಅವರ ಮಾರ್ಗದಲ್ಲೇ ನಡೆ. ದೀನದಲಿತರಿಗೆ ಬಾಳ್ವೆ ಕೊಡು. ಅಶಿಕ್ಷಿತರಿಗೆ ವಿದ್ಯೆ ಕೊಡು, ರೋಗಿಗಳಿಗೆ ಔಷಧೋಪಚಾರ ಮಾಡಿಸು, ಕೊಳೆಗೇರಿಯಲ್ಲಿ ಅಮಾನವೀಯವಾಗಿ ಜೀವಿಸುವವರಿಗೆ ಭರವಸೆಯ ಬೆಳಕಾಗು. ನಿನಗೆ ಬೇಕಾದಾಗಲೆಲ್ಲ, ಬೆಹರಾಮ್‌ಜೀಯವರು ಬದುಕಿದ್ದರೆ ಏನು ಮಾಡುತ್ತಿದ್ದರು ಎನ್ನುವ ಕುರಿತು ನನ್ನ ತಿಳಿವಳಿಕೆಯ ಪರಿಧಿಯಲ್ಲಿ ನಿನಗೆ ಸಲಹೆ ಕೊಡಬಲ್ಲೆ. ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಬೆಹರಾಮ್‌ಜೀಯವರ ಗರಡಿಯಲ್ಲಿ ಪಳಗಿದ ನಿನಗೆ ಶೋಭೆ ತರುವುದಿಲ್ಲ. ಇನ್ನು ನಿನ್ನಿಷ್ಟ'' ಎಂದರು.

ಮೋರೆಯವರ ಮಾತು ಅಪ್ಪುರಾಯನಿಗೆ ನಾಟಿತು. ಅಪ್ಪುರಾಯ ಕಾಮತ್ ಕೆಲವೇ ಕೆಲವು ವರ್ಷಗಳಲ್ಲಿ ಮಧ್ಯ ಹಾಗೂ ಪೂರ್ವ ಮುಂಬಯಿಯ ಜನಪ್ರಿಯ ಸಮಾಜ ಸೇವಕನಾಗಿ ಜನಗಳ ಪಾಲಿಗೆ ಅಪ್ಪಾ ಸಾಹೇಬ್ ಆಗಿಬಿಟ್ಟ.

ಅಪ್ಪಾ ಸಾಹೇಬರು ಮೊದಲು ಒತ್ತು ಕೊಟ್ಟದ್ದು ಶಿಕ್ಷಣದತ್ತ, ಅದರಲ್ಲೂ ಬಡಬಗ್ಗರ ಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದೆಂದು ಸಂಕಲ್ಪಿಸಿದ ಅವರು ಡೋಂಗ್ರಿ, ವಡಾಲ, ಗೋವಂಡಿ, ಧಾರಾವಿಗಳಲ್ಲಿ ಹಲವಾರು ಶಾಲೆಗಳನ್ನು ಸ್ಥಾಪಿಸಿದ್ದಲ್ಲದೇ, ಹೆಣ್ಣುಮಕ್ಕಳಿಗೆ ಶಿಕ್ಷಣದ ಜೊತೆ ಜೊತೆಗೆ ಕರಕುಶಲ ವಸ್ತುಗಳ ತಯಾರಿಕೆ, ಹೊಲಿಗೆ ಮತ್ತು ಕಸೂತಿ, ಅಡುಗೆಯ ಮಸಾಲೆ ಪೌಡರ್ ತಯಾರಿ ಮುಂತಾದ ಬಿಡುವಿನ ಸಮಯದಲ್ಲಿ ತೊಡಗಿಕೊಳ್ಳಬಹುದಾದ ವೃತ್ತಿಪರ ಶಿಕ್ಷಣವನ್ನು ಒದಗಿಸುವ ಏರ್ಪಾಟು ಮಾಡಿದರು. ಈ ಎಲ್ಲ ಶಾಲೆಗಳು ಮತ್ತು ವೃತ್ತಿಪರ ಶಿಕ್ಷಣ ಕೇಂದ್ರಗಳು ಪ್ರತಿಷ್ಠಿತ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗಿಂತಲೂ ಉತ್ತಮ ಎನ್ನುವ ಹೆಸರು ಗಳಿಸಿದವು.

ಕೊಳೆಗೇರಿಯಲ್ಲಿ ದುರ್ಭರ ಬದುಕು ಸಾಗಿಸುತ್ತಿದ್ದ ಹಲವಾರು ಬಡ ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯ, ಅಡುಗೆಮನೆ ಹಾಗೂ ಇನ್ನೊಂದು ಕೋಣೆ ಇರುವ ಸಹಸ್ರಾರು ಮನೆಗಳನ್ನು ನಿರ್ಮಿಸಿಕೊಟ್ಟರು. ಹಲವಾರು ಧರ್ಮಾರ್ಥ ಆಸ್ಪತ್ರೆಗಳು, ಶಾಲೆ, ಕಾಲೇಜು, ಉನ್ನತ ಶಿಕ್ಷಣದ ಸಂಸ್ಥೆಗಳು ಬೆಹರಾಮ್‌ಜೀಯವರ ಹೆಸರಲ್ಲಿ ಇವರಿಂದ ಸ್ಥಾಪಿತಗೊಂಡವು. ಡೋಂಗ್ರಿಯಲ್ಲಿ ಅಪ್ಪಾ ಸಾಹೇಬರು ನಿರ್ಮಿಸಿದ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಹಾಗೂ ಅಲ್ಲಿನ ಡಾಕ್ಟರುಗಳು ದೇಶದಲ್ಲೇ ಅಪಾರ ಖ್ಯಾತಿ ಗಳಿಸುವಂತಾಗಿತ್ತು.

ರಾಜ್ಯದ ಹತ್ತು ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟ ಅಪ್ಪಾ ಸಾಹೇಬರು ಎಂದೂ ತಮ್ಮ ಸಂಪತ್ತನ್ನು ತಮಗಾಗಿ ಉಪಯೋಗಿಸಿಕೊಳ್ಳಲಿಲ್ಲ. ದಾದರ್ ಹಾಗೂ ಚೆಂಬೂರಿನಲ್ಲಿರುವ ತಮ್ಮ ವಿಶಾಲ ಬಂಗಲೆಗಳನ್ನು ತಾತ್ಕಾಲಿಕ ಅನಾಥಾಶ್ರಮವಾಗಿ ಮಾಡಿಕೊಂಡಿದ್ದರು. ಇಲ್ಲಿ ಸೇರಿಕೊಂಡ ಅನಾಥ ಮಕ್ಕಳು, ಮಹಿಳೆಯರು ಅವರಿಗೆ ಸರಿಯಾದ ಬೇರೆ ವ್ಯವಸ್ಥೆ ಆಗುವ ತನಕ ಇಲ್ಲಿ ಇರಬಹುದಾಗಿತ್ತು. ಅವರಿಗೆ ಊಟ, ಬಟ್ಟೆಬರೆ ಒದಗಿಸಲಾಗುತ್ತಿದ್ದು, ಶಿಕ್ಷಣ ಸಮೇತ ಎಲ್ಲ ಸೌಲಭ್ಯಗಳಿರುವ, ಅಪ್ಪಾ ಸಾಹೇಬರು ನಡೆಸುತ್ತಿರುವ ಇತರ ಅನಾಥಾಶ್ರಮಗಳಿಗೆ ಅವರನ್ನು ಸೇರಿಸಲಾಗುತ್ತಿತ್ತು.

ಅಪ್ಪಾ ಸಾಹೇಬರು ಬಂಗಲೆಗಳನ್ನು ಎಂದೂ ತಮ್ಮ ವಾಸ್ತವ್ಯಕ್ಕಾಗಿ ಬಳಸುತ್ತಿರಲಿಲ್ಲ. ಅವರು ವಾಸಿಸುತ್ತಿದ್ದುದು ಚೆಂಬೂರಿನಲ್ಲಿರುವ ಎರಡು ವಿಶಾಲ ಕೋಣೆಗಳು, ಅಡುಗೆಮನೆ, ಹಜಾರವಿರುವ